ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೊಂದನೆಯ ಅಧಿವೇಶನ
ಶುಕ್ರವಾರ, ದಿನಾಂಕ: 25ನೇ ಸೆಪ್ಟಂಬರ್, 2020

ಕೆ.ಆರ್.ಐ.ಡಿ.ಎಲ್ ಮೂಲಕ ಕಾಮಗಾರಿಗಳ ಅನುಷ್ಠಾನದ ಬಗ್ಗೆ

ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

618 (813) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕೆ.ಆರ್.ಐ.ಡಿ.ಎಲ್) ನಿಂದ ನಿರ್ವಹಿಸುವ ಕಾಮಗಾರಿಗಳಿಗೆ ಬಳಸುವ ಸಿಮೆಂಟ್ ಮತ್ತು ಕಬ್ಬಿಣವನ್ನು ಯಾವ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆ; (ಇದಕ್ಕಿರುವ ಮಾನದಂಡಗಳೇನು)

(ಆ) ಕಳೆದ ಸಾಲಿನಲ್ಲಿ ಒಟ್ಟು ಎಷ್ಟು ಮೌಲ್ಯದ ಸಿಮೆಂಟ್ ಮತ್ತು ಕಬ್ಬಿಣವನ್ನು ಖರೀದಿಸಲಾಗಿದೆ;

(ಇ) ಕಳೆದ ಸಾಲಿನಲ್ಲಿ ಖರೀದಿಸಿದ ಸಿಮೆಂಟ್ ಮತ್ತು ಕಬ್ಬಿಣವನ್ನು ಪರೀಕ್ಷಿಸಿರುವ ವಿಧಾನ ಮತ್ತು ಪರೀಕ್ಷಿಸಿದ ಲ್ಯಾಬ್‌ನ ವಿವರಗಳೇನು; (ಪರೀಕ್ಷಾ ವರದಿಯನ್ನು ಒದಗಿಸುವುದು)

(ಈ) ಸಿಮೆಂಟನ್ನು ಖರೀದಿಸಿದ ನಂತರ ಕಾಮಗಾರಿಗಳಿಗೆ ಬಳಸುವವರೆಗೆ ಅದನ್ನು ಹೇಗೆ ಸಂರಕ್ಷಿಸಲಾಗುತ್ತದೆ; (ವಿವರ ನೀಡುವುದು)

(ಉ) ಅವಧಿ ಮೀರಿದ ಸಿಮೆಂಟ್‌ನ್ನು ಯಾವ ರೀತಿ ವಿಲೇವಾರಿ ಮಾಡಲಾಗುತ್ತದೆ; ಇಲ್ಲಿಯವರೆವಿಗೂ ಎಷ್ಟು ಸಿಮೆಂಟ್ ಬ್ಯಾಗ್‌ಗಳನ್ನು ವಿಲೇವಾರಿ ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಊ) 2019-20ನೇ ಸಾಲಿನಲ್ಲಿ ಕೆ.ಆರ್.ಐ.ಡಿ.ಎಲ್ ನಿಂದ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಯಾವ ಯಾವ ಇಲಾಖೆಯಿಂದ ಎಷ್ಟು ಕಾಮಗಾರಿಗಳನ್ನು ಪಡೆಯಲಾಗಿದೆ; (ಇಲಾಖಾವಾರು ವಿವರ ನೀಡುವುದು)

(ಋ) ಸದರಿ ಇಲಾಖೆಗಳಿಂದ ಕಾಮಗಾರಿಗಳು ಪೂರ್ಣಗೊಳ್ಳುವ ಮುನ್ನ ಪಡೆಯುವ ಮೊತ್ತವನ್ನು ಯಾವ ಬ್ಯಾಂಕ್‌ನಲ್ಲಿ ಠೇವಣಿ ಇಡಲಾಗಿದೆ; ಬ್ಯಾಂಕ್ ಠೇವಣಿಯಿಂದ ಬಂದ ಬಡ್ಡಿಯ ವಿವರಗಳೇನು; ಅದನ್ನು ಯಾವ ರೀತಿ ಬಳಕೆ ಮಾಡಲಾಗಿದೆ? (ವಿವರ ನೀಡುವುದು)